ಇದಲ್ಲದೆ ೨೩,೩೦೬-೩೮ರೂ. ನಷ್ಟು ಬೆಲೆ ಬಾಳುವ ಔಷಧಿಗಳನ್ನು ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಆರೋಗ್ಯಾಧಿಕಾರಿಗಳ ಮೂಲಕ ನೇರ ಖರೀದಿ ಮಾಡಲಾಗಿದೆ

(ಇ) ೧,೪೬,೩೮೬-೮೩

(ಈ) ಹೌದು, ೧೦೫-೬೪

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಹೊರ ರೋಗಿಗಳಿಗೆ ಮತ್ತು ಒಳರೋಗಿಗಳಿಗೆ ಸಾಮಾನ್ಯವಾಗಿ ಒಂದು ರೋಗಕ್ಕೆ ಒಂದು ರೂಪಾಯಿ ಹತ್ತು ಪೈಸೆ-ಇಪ್ಪತ್ತು ಪೈಸೆಯಷ್ಟು ಔಷಧಿಯನ್ನು ಇವರು ಕೊಡುತ್ತಾರೆಂದು ತಿಳಿಸಿದ್ದಾರೆ. ಇದರ ಅರ್ಥ ಎನೆಂದರೆ, ಇಷ್ಟೇ ಔಷಧಿಯಲ್ಲಿ ಗುಣವಾಗಬೇಕು. ಇಲ್ಲದಿದ್ದರೆ ಅವರ ಪರಿಸ್ಥಿತಿ ಹೇಗೆ ಎನ್ನುವುದನ್ನೂ ಸಹ ಮಾನ್ಯ ಮಂತ್ರಿಗಳು ಈ ಸಂದರ್ಭದಲ್ಲಿ ತಿಳಿಸಬೇಕಾಗಿ ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಹಾಗೇನೂ ಇಲ್ಲ. ಕಾಯಿಲೆ ಗುಣವಾಗದಿದ್ದರೆ ಹೆಚ್ಚಿನ ಔಷಧಿಗಳನ್ನು ಕೊಟ್ಟಿದ್ದೇವೆ. ಯಾವುದೇ ಸರ್ಕಾರಿ ಆಸ್ಪತ್ರೆಯಲ್ಲಿ ಇದ್ದಾಗ ಆ ರೋಗಿ ಗುಣವಾಗುವಾಗದಿದ್ದರೆ, ಆ ರೋಗಿಯನ್ನು ಬೇರೆ ಆಸ್ಪತ್ರೆಗೆ ವರ್ಗಾವಣೆ ಮಾಡುವ ಕಾರ್ಯಕ್ರಮವನ್ನೂ ಕೂಡ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಪ್ರತಾಪ ಚಂದ್ರಶೆಟ್ಟಿ.—ನೀವು ೯೧,೩೦೫ ರೂಪಾಯಿನ ಔಷಧಿಯನ್ನು ಕೊಟ್ಟಿದ್ದೀರಿ, ಒಳ ರೋಗಿಗಳು ೨೮೯೦ ಮತ್ತು ಹೊರ ರೋಗಿಗಳು ೬೬೩೪ ಎಂದು ಹೇಳಿದ್ದೀರಿ. ಹಾಗಾದರೆ ಅವರಿಗೆ ಎಷ್ಟು ರೂಪಾಯಿನ ಔಷಧಿ ಸಿಗುತ್ತದೆ ?

ಅಧ್ಯಕ್ಷರು.—ನಿಮ್ಮ ಪ್ರಶ್ನೆ ನನಗೇ ಅರ್ಥವಾಗಲಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅವರು ಕೇಳುತ್ತಿರುವುದು ನನಗೆ ಗೊತ್ತಾಯಿತು. ನಾವು ರೋಗಿಗಳ ಆಹಾರ ಪದಾರ್ಥಗಳಿಗಾಗಿ ಒಂದು ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಇತರ ಔಷಚಾರಗಳಿಗೆ ಒಂದೂವರೆ ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಸದಸ್ಯರು, ಆಸ್ಪತ್ರೆಯಲ್ಲೇನಾದರೂ ಔಷಧಿ ಸಾಕಾಗುತ್ತಿಲ್ಲವೆಂದು ನಿಖರವಾಗಿ ಹೇಳಿದರೆ ತಕ್ಷಣ ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಪ್ರತಾಪ ಚಂದ್ರಶೆಟ್ಟಿ.—ನಾನು ಹೇಳುವುದೇನೆಂದರೆ, ಎಷ್ಟು ಒಳರೋಗಿಗಳು ಮತ್ತು ಹೊರ ರೋಗಿಗಳು ಬಂದರೂ ೯೧ ಸಾವಿರ ರೂಪಾಯಿನ ಔಷಧಿ ಕೊಟ್ಟರೆ ಸಾಕಾಗುವುದಿಲ್ಲ. ಇನ್ನೂ ಹೆಚ್ಚಿಗೆ ಔಷಧಿ ಕೊಡಬೇಕು. ಈ ಆಸ್ಪತ್ರೆಯಂ ಸಿಬ್ಬಂದಿಗಳಿಗೆ ೫೯೨೧೦೫ ರೂಪಾಯಿಗಳನ್ನು ಖರ್ಚು ಮಾಡುವಂತೆ ಆಸ್ಪತ್ರೆಯಲ್ಲಿ ಪ್ರಾಮಾಣಿಕವಾಗಿ ಔಷಧಿಯನ್ನು ವಿತರಣೆ ಮಾಡಬೇಕೇ ಹೊರತು ಕೇವಲ ಸೆಸರಿಗೆ ಮಾತ್ರ ಆಸ್ಪತ್ರೆ ಎಂದು ಮಾಡಿ ಬೇಕಾಬಿಟ್ಟಿ ಔಷಧಿ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ತಾಲ್ಲೂಕು ಕೇಂದ್ರಗಳಲ್ಲಿರತಕ್ಕ ಆಸ್ಪತ್ರೆಗೆ ಹೆಚ್ಚಿನ ಔಷಧಿಯನ್ನು ಸರಬರಾಜು ಮಾಡಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹೆಚ್ಚಿನ ಔಷಧಿ ಕಳುಹಿಸುವುದಕ್ಕೆ ಸ್ಥಳೀಯ ವೈದ್ಯಾಧಿಕಾರಿಗಳು ಹೇಳಿದರೆ ವ್ಯವಸ್ಥೆ ಮಾಡುತ್ತೇವೆ. ಸಿಬ್ಬಂದಿ ವರ್ಗದವರ ಇನ್ನೂ ಅನೇಕ ಹುದ್ದೆಗಳು ಬೇಕಾಗಿವೆ, ಅದು ಇನ್ನೂ ಹೆಚ್ಚಾಗಬಹುದೇ ಹೊರತು ಕಡಿಮೆ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಪ್ರತಾಪ ಚಂದ್ರಶೆಟ್ಟಿ.—ಸಿಬ್ಬಂದಿಗಳನ್ನು ಕಡಿಮೆ ಮಾಡಬೇಕೆಂದು ಹೇಳುತ್ತಿಲ್ಲ. ಔಷಧಿಯನ್ನು ಜಾಸ್ತಿ ಕಳುಹಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಎಷ್ಟು ಉಪ ಪ್ರಶ್ನೆಗಳನ್ನು ಕೇಳುವುದು ?

ಶ್ರೀ ಪ್ರತಾಪ ಚಂದ್ರಶೆಟ್ಟಿ.—ಅವರು ಹೇಳಿರುವ ಉತ್ತರಕ್ಕೆ ಪ್ರಶ್ನೆ ಕೇಳುತ್ತಿದ್ದೇನೆ.

ರಾಜ್ಯದ ಆಡಳಿತ ಸುಧಾರಣೆಗಳು

(೧೦೮೪) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಆಡಳಿತವನ್ನು ಸುಧಾರಿಸುವ ಬಗ್ಗೆ ಸರ್ಕಾರದವರು ಹಾಕಿಕೊಂಡಿರುವ ಯೋಜನೆಗಳಾವುವು ?

ಅ) ಆಡಳಿತ ಸುಧಾರಿಸಲಂ ಯೋಜನೆಗಳು ಜಾರಿಗೆ ಬಂದಲ್ಲಿ, ಸರ್ಕಾರದ ಹಣಕಾಸಿನ ಮೇಲೆ ವಿತವ್ಯಯದ ಬಗ್ಗೆ ಆಗಂವ ಪರಿಣಾಮಗಳೇನು ?

ಇ) ಆಡಳಿತ ಸುಧಾರಣಾ ಸಮಿತಿಯು ಮಾಡಿದ ಶಿಫಾರಸುಗಳಲ್ಲಿ ಯಾವ್ಯಾವ ಶಿಫಾರಸುಗಳನ್ನು ಜಾರಿಗೆ ತರಲಾಗಿದೆ.

ಈ) ಆಡಳಿತ ಸುಧಾರಣೆ ಸಮಿತಿಯು ವರದಿಯು ಶಿಫಾರಸಂಗಳಲ್ಲಿ ಜಾರಿಗೆ ಕೊಡದಿರುವ ಶಿಫಾರಸುಗಳು ಯಾವುವು ಮತ್ತು ಜಾರಿಗೆ ತರದಿರಲು ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಅನಂಬಂಧ–೧ನ್ನು ದಯವಿಟ್ಟು ನೋಡಿ.

ಆ) ಸರ್ಕಾರಿ ಕಚೇರಿಗಳ ಕಾರ್ಯಾಧ್ಯಯನಗಳ ಮುಖ್ಯ ಉದ್ದೇಶಗಳಲ್ಲಿ ವಿತವ್ಯಯ ಸಾಧನೆಯೂ ಒಂದು.

ಇ) ೨೮ ಶಿಫಾರಸುಗಳನ್ನು ರಾಜ್ಯ ಸರ್ಕಾರವು ಒಪ್ಪಿಕೊಂಡು ಜಾರಿಗೆ ತಂದಿದೆ. ಆದರಲ್ಲೂ ಲೋಕ ಆಯುಂಕ್ತ ಸ್ಥಾಪನೆಯವಲ್ಲಿ ಈಗಾಗಲೇ ಅಧ್ಯಾದೇಶವನ್ನು ೭–೧೦–೧೯೮೪ರಂದು ಹೊರಡಿಸಲಾಗಿದೆ ಎನ್ನುವುದನ್ನು ಇಲ್ಲಿ ಸ್ಮರಿಸಬಹುದು. ಈ ಶಿಫಾರಸುಗಳ ಪಟ್ಟಿಯನ್ನು ಅನಂಬಂಧ–೨ರಲ್ಲಿ ಕೊಡಲಾಗಿದೆ.

ಈ) ಉಳಿದ ೨೭ ಶಿಫಾರಸಂಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದ ಅಭಿಪ್ರಾಯುಗಳನ್ನೊಳಗೊಂಡ ಉತ್ತರಗಳನ್ನು ಕಳುಹಿಸಲಾಗಿದೆ. ಕೇಂದ್ರ ಸರ್ಕಾರ ಅವುಗಳ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಬೇಕು. ಅನುಬಂಧ–೩ನ್ನು ನೋಡಿ.

ಅನುಬಂಧ–೧

ರಾಜ್ಯದ ಆಡಳಿತವನ್ನು ಸುಧಾರಿಸುವ ಬಗ್ಗೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಆಡಳಿತ ಸುಧಾರಣೆ ವಿಭಾಗವನ್ನು ಅದರ ಹೆಸರೇ ಸೂಚಿಸುವಂತೆ, ಆಡಳಿತದಲ್ಲಿ ಸುಧಾರಣೆ ತರುವುದಕ್ಕಾಗಿಯೇ ರಚಿಸಲಾಗಿದೆ. ಈ ವಿಭಾಗವು ಆಡಳಿತದಲ್ಲಿ ಸುಧಾರಣೆ ತರುವ ಬಗ್ಗೆ ಹಾಕಿಕೊಂಡಿರುವ ಯೋಜನೆಗಳಲ್ಲಿ ಮುಖ್ಯವಾಗಿ :—

(೧) ಸರ್ಕಾರಿ ಕಛೇರಿಗಳ ಕಾರ್ಯಾಧ್ಯಯನ,

(೨) ಸರ್ಕಾರಿ ಇಲಾಖೆಗಳ ಕಾರ್ಯಕಲಾಪಗಳ ವಿಧಾನಗಳ ಸರಳೀಕರಣ,

(೩) ಸರ್ಕಾರಿ ಕಛೇರಿಗಳ ನಿರೀಕ್ಷಣೆ (ಇನ್ಸ್‌ಪೆಕ್ಷನ್),

(೪) ಆಡಳಿತದಲ್ಲಿ ಯಾಂತ್ರೀಕರಣ,

(೫) ಸರ್ಕಾರಿ ಕಛೇರಿಗಳ ನವೀಕರಣ, ಮತ್ತು

(೬) ಸರ್ಕಾರಿ ಕಛೇರಿಗಳ ಸಿಬ್ಬಂದಿಗೆ ತರಬೇತಿಗಳು ಸೇರಿವೆ.

ಅನುಬಂಧ-೨

ಕ್ರಮ ಸಂಖ್ಯೆ	ಶಿಫಾರಸ್ಸು ಸಂಖ್ಯೆ		ವಿಷಯ
೧	೨		೩
೧	೧	(೧)	ರಾಜ್ಯಪಾಲರಿಗೆ ಕರ್ತವ್ಯಗಳನ್ನು ವಹಿಸುವುದು ಮತ್ತು ಅವರು ಅವುಗಳನ್ನು ಆತಂಕವಿಲ್ಲದೇ ನಿರ್ವಯಿಸುವುದು.
೨	೧	(೨)	ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಅವಧಿಯಲ್ಲಿ ರಾಜ್ಯಪಾಲರ ಪಾತ್ರ.
೩	೧	(೩)	ರಾಜ್ಯದಲ್ಲಿ ರಾಷ್ಟ್ರಪತಿಗಳ ಆಳ್ವಿಕೆಯಲ್ಲಿ ಸಲಹಾ ಸಮಿತಿಗಳನ್ನು ರಚಿಸುವುದು.
೪	೨	(೧)	ರಾಜ್ಯದಲ್ಲಿ ಸಚಿವ ಸಂಪುಟದಗಾತ್ರ–ಅದಕ್ಕಾಗಿ ಸಲಹೆಗಳು.
೫	೨	(೨)	ಸಚಿವ ಸಂಪುಟದಲ್ಲಿ ಇಲಾಖೆಗಳ ಪ್ರತಿನಿಧಿತ್ವ
೬	೨	(೩)	ಮುಖ್ಯ ಮಂತ್ರಿಗಳು ತಮ್ಮ ಸಹದ್ಯೋಗಿಗಳನ್ನು ಆಯ್ಕೆ ಮಾಡುವಾಗ ವಿತೇಷ ಗಮನ ಕೊಡುವ ಬಗ್ಗೆ.
೭	೩	(೨)	ಸಚಿವ ಸಂಪುಟದ ದಕ್ಷ ಮತ್ತು ಸರಳ ಕಾರ್ಯನಿರ್ವಹಣೆ–ಮುಖ್ಯ ಮಂತ್ರಿಗಳ ಅವಿಭಾಜ್ಯ ಹೊಣೆಗಾರಿಕೆ.
೮	೩	(೩)	ಮುಖ್ಯಮಂತ್ರಿಗಳಿಂದ ಮಂತ್ರಿಗಳ ಕಾರ್ಯನಿರ್ವಹಣೆ ಮೇಲ್ವಿಚಾರಣೆ
೯	೪	(೧)	ಸಚಿವ ಸಂಪುಟದ ಸಭೆ
೧೦	೪	(೨)	ಸಚಿವ ಸಂಪುಟದ ಸ್ಥಾಯಿ ಸಮಿತಿಗಳು ಮತ್ತು ಅವುಗಳು ನಿರ್ವಹಿಸುವ ಸಮಸ್ಯೆಯ ವಿಸ್ತೀರ್ಣ.
೧೧	೪	(೩)	ಸಚಿವ ಸಂಪುಟ ಸಭೆಗಳಲ್ಲಿ ತೆರಿಗೆಗಳನ್ನು ಹೊರಿಸುವ ಬಗ್ಗೆ ಚರ್ಚೆ ಮತ್ತು ನಿರ್ಣಯ.
೧೨	೬	(೩) (೧)	ಸರ್ಕಾರಿ ಅಧಿಕಾರಿಗಳಲ್ಲಿ ಯಾವುದೇ ಒಬ್ಬ ಮಂತ್ರಿಗಳ ಜೊತೆಗೆ ಅನಪೇಕ್ಷಿತ ವೈಯುಕ್ತಿಕ ಸಂಬಂಧ ಬೆಳೆಯಂವುದನ್ನು ತಡೆಯುವುದು.
೧೩	೬	(೩) (೪)	ಸರ್ಕಾರಿ ಅಧಿಕಾರಿಗಳು ರಾಜಕೀಯದಲ್ಲಿ ಅನಾಸಕ್ತ ಮತ್ತು ಅನಾಮಧೇಯವಾಗಿ ಉಳಿಯುವುದು.
೧೪	೮		ರಾಜ್ಯಪಾಲರ ಮತ್ತು ರಾಜಭವನಗಳ ಮೇಲೆಸಿ ವೆಚ್ಚವನ್ನು ಕಡಿತ ಗೊಳಿಸುವುದು.
೧೫	೧೧	(೨)	ಮುಖ್ಯ ಕಾರ್ಯದರ್ಶಿಗಳು ಸೇವಾ ಅವಧಿ ಇತ್ಯಾದಿಗಳು.

ಅನುಬಂಧ–೨

೧೬	೧೬	(೧)	ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವುದು.
೧೭	೧೭		ಜಿಲ್ಲಾಧಿಕಾರಿಗಳ ಮತ್ತು ಜಿಲ್ಲೆಯ ಇತರ ಅಧಿಕಾರಿಗಳ ಶಿಷ್ಟಾಚಾರ ಕರ್ತವ್ಯಗಳು.
೧೮	೧೯		ಜಿಲ್ಲಾಧಿಕಾರಿಗಳ ಪ್ರವಾಸ.
೧೯	೨೦	(೧) (೨)	ಜಿಲ್ಲೆಯ ಆಡಳಿತದಲ್ಲಿ ಆಡಳಿತದ ಘಟಕಗಳು.
೨೦	೨೧		ಜಿಲ್ಲೆಗಳ ಸೀಮಾ ರೇಖೆಗಳನ್ನು ಪುನರ್ ವ್ಯವಸ್ಥಿತಗೊಳಿಸುವುದು.
೨೧	೩೫		ಕಂದಾಯ ನ್ಯಾಯ ಮಂಡಳಿಗಳು.

೧	೨		೩
೨೨	೩೮		ರಾಜ್ಯದಲ್ಲಿ ಲೋಕಪಾಲ್ ಮತ್ತು ಲೋಕ ಆಯುಕ್ತ ರಚಿಸುವುದು.
೨೩	೪೯		ಸಂಸ್ಥೆ ಮತ್ತು ವಿಧಾನಗಳ ವಿಭಾಗಗಳು.
೨೪	೪೨		ಕೇಂದ್ರ ಸರ್ಕಾರದ ಹುದ್ದೆಗಳಿಗೆ ರಾಜ್ಯ ಸಿಬ್ಬಂದಿ ವರ್ಗದವರನ್ನು ನೇಮಿಸುವುದು.
೨೫	೪೫	(೧) (೨)	ಸಚಿವಾಲಯಗಳಲ್ಲಿ ವಿಶಿಷ್ಟ ಕರ್ತವ್ಯ ಅಥವಾ ಪರಿಗಣಿತ ತಿಳುವಳಿಕೆಯು ಅಗತ್ಯವಿದ್ದ ಉಪ ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ ಹುದ್ದೆಗಳಿಗೆ ಸೇವೆಗಳಿಗೆ ಸಿಬ್ಬಂದಿಯನ್ನು ನೇಮಿಸುವುದು.
೨೬	೪೬ (ಎ)		ಅಧಿಕಾರಿಗಳ ವರ್ಗಾವಣೆ
೨೭	೪೭, ೪೮, ೪೯		ಲೋಕಸೇವಾ ಆಯೋಗದ ನೇಮಕಾತಿಯಲ್ಲಿ ಪ್ರಾತಿನಿಧ್ಯ.
೨೮	--		ವಿವಿಧ ವರ್ಗಗಳ ಹುದ್ದೆಗಳಿಗೆ ಬಡ್ತಿ ಮತ್ತು ಶಿಸ್ತು.

ಅನುಬಂಧ-೩

ಕ್ರಮ ಸಂಖ್ಯೆ	ಶಿಫಾರಸು ಸಂಖ್ಯೆ		ವಿಷಯ
೧	೩	(೧)	ಸಚಿವ ಸಂಪುಟದ ಸಾಮೂಹಿಕ ಜವಾಬ್ದಾರಿ ತತ್ವವನ್ನು ಬಲಪಡಿಸುವುದು ಪುನಃ ಜಾರಿಗೆ ತರುವುದು.
೨	೫		ಮಂತ್ರಿಗಳ ಪ್ರವಾಸ
೩	೬	(೧)	ದೈನಂದಿನ ಆಡಳಿತದಲ್ಲಿ ಮಂತ್ರಿಗಳಿಂದ ಹಸ್ತಕ್ಷೇಪ ಮಾಡದಿರುವಿಕೆ.
೪	೬	(೨)	ಮಂತ್ರಿಗಳ ಮತ್ತು ಕಾರ್ಯದರ್ಶಿಗಳ ನಡುವಣ ಸಂಬಂಧ.
೫	೬	(೩)	ಕಡತಗಳಲ್ಲಿ ದೊತ್ತ ನಿರ್ಣಯಗಳನ್ನು ಬರಪಣಿಗೆಯಲ್ಲಿ ಕಾಣಿಸುವುದು.
೬	೬	(೩) (೨)	ಮಂತ್ರಿಗಳಿಗೆ ರಚಿಗಳ ಅವಶ್ಯಕತೆ
೭	೬	(೩) (೩)	ಮಂತ್ರಿಗಳಿಗೆ (ಸಾಮಾನ್ಯ) ತಿಳುವಳಿಕೆಯು ವಿವಿಧ ಶಾಖೆಗಳ ಪರಿಚಯದ ಅವಶ್ಯಕತೆ.
೮	೬	(೩) (೫)	ವಿಧಾನ ಮಂಡಲ ಸದಸ್ಯರಿಗೆ ಆಚಾರ ಸಂಹಿತೆ ಅಂಗೀಕರಣ.
೯	೭		ಆಡಳಿತದ ಆಯ್ದ ಕೆಲವು ಕ್ಷೇತ್ರಗಳಲ್ಲಿ ಸ್ಥಾಯೀ ಸಮಿತಿಗಳನ್ನು ರಚಿಸುವುದು.
೧೦	೯	(೧) (೨) (೩)	ಸಚಿವಾಲಯದ ವಿವಿಧ ಆಡಳಿತ ಇಲಾಖೆಗಳಲ್ಲಿ ವಿಷಯಗಳ ಹಂಚಿಕೆ.
೧೧	೯	(೪)	ಕಾರ್ಯಾಂಗ ಕಾರ್ಯಕಾರಿ ಕರ್ತವ್ಯಗಳನ್ನು ಧೋರಣೆ ವಿಷಯಗಳಿಂದ ಬೇರ್ಪಡಿಸುವ ಅವಶ್ಯಕತೆ.
೧೨	೧೦	(೧)	ಆರ್ಥಿಕ ಮತ್ತು ಸಿಬ್ಬಂದಿ ಕೋಶಗಳನ್ನು ರಚಿಸುವುದು.
೧೩	೧೦	(೨)	ಸಿಬ್ಬಂದಿಗಾಗಿ ಹೊಸ ಇಲಾಖೆಯನ್ನು ರಚಿಸುವುದು.
೧೪	೧೦	(೩)	ಧೋರಣ ಸಲಹಾ ಸಮಿತಿಯನ್ನು ರಚಿಸುವುದು.
೧೫	೧೦	(೧)	ಕಾರ್ಯದರ್ಶಿಗಳಿಗೆ ತಮ್ಮ ದೈನಂದಿನ ಮಾಮೂಲು ಕೆಲಸದಿಂದ ಬಿಡುಗಡೆ.
೧೬	೧೨	(೧) (೨)	ನಿರ್ಣಯಗಳನ್ನು ತೆಗೆದುಕೊಳ್ಳುವ ಮಟ್ಟ ಇತ್ಯಾದಿ.
೧೭	೧೩	(೧)(೨)(೩)	ಕಾರ್ಯಾಂಗ ಕಾರ್ಯಕಾರಿ ಇಲಾಖೆಗಳಿಗೆ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು ನಿಯೋಜಿಸುವುದು.

೧	೨	೩
೧೮	೧೪ (೧)(೨)(೩)	ಕೆಲವು ಕಾರ್ಯಾಂಗ ಇಲಾಖೆಗಳ ಕೇಂದ್ರ ಕಚೇರಿಗಳನ್ನು ಸಂಬಂಧಿತ ಆಡಳಿತಾತ್ಮಕ ಕಚೇರಿಗಳೊಡನೆ ವಿಲೀನೀಕರಿಸುವುದು.
೧೯	೧೫ (೧)–(೪)	ಕಾರ್ಯಾಂಗ ಇಲಾಖೆಗಳ ಪುನರ್ ಸಂಘಟನೆ
೨೦	೧೬ (೨) (೩)	ಜಿಲ್ಲಾ ಆಡಳಿತದ ವಿಭಜನೆ.
೨೧	೧೭ (೧)	ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳಿಂದ ಪೋಲೀಸರ ಮೇಲೆ ಸಾಮಾನ್ಯ ಮೇಲ್ವಿಚಾರಕ ನಿಯಂತ್ರಣ.
೨೨	೧೭ (೨)	ಪೋಲೀಸ್ ದೈನಂದಿನ ಕೆಲಸಗಳಲ್ಲಿ ಜಿಲ್ಲಾ ಪೋಲೀಸ್ ಅಧಿಕಾರಿಯ ಪೂರ್ಣ ನಿಯಂತ್ರಣ.
೨೩	೧೭ (೩)	ಜಿಲ್ಲಾ ಪೋಲೀಸ್ ಅಧಿಕಾರಿಗಳ ಕಾರ್ಯನಿರ್ವಹಣೆಯ ಬಗ್ಗೆ ಜಿಲ್ಲಾಧಿಕಾರಿಗಳಿಂದ ಅಭಿಪ್ರಾಯ ನಿರೂಪಣೆ.
೨೪	೨೨ ರಿಂದ ೩೩	ಅಧ್ಯಾಯ–೬–ಪಂಚಾಯಿತಿ ರಾಜ್ಯ ಆಡಳಿತ.
೨೫	೩೪	ಕಮಿಷನರ್ ಹುದ್ದೆಗಳನ್ನು ರದ್ದುಪಡಿಸುವುದು.
೨೬	೩೬ (೧) (೨)	ವ್ಯಾಪ್ತಿದೇಶಿಕ ಕಚೇರಿಗಳು.
೨೭	೩೭	ನಗರ ಮತ್ತು ನಾಡಂ ಯೋಜನೆಗಳು.
೨೮	೪೦	ರಾಜ್ಯಗಳಲ್ಲಿ ಮುಖ್ಯಮಂತ್ರಿಗಳ ಅಧೀನದಲ್ಲಿ ಸಿಬ್ಬಂದಿ ಇಲಾಖೆಗಳನ್ನು ರಚಿಸುವುದು.
೨೯	೪೧ (೧) (೨)	ರಾಜ್ಯ ಸೇವೆಗಳನ್ನು (ಸ್ಟೇಟ್ ಸರ್ವೀಸಸ್) ರೂಪಿಸುವುದು.
೩೦	೪೩	ಇಲಾಖಾ ಮುಖ್ಯಾಧಿಕಾರಿಗಳ ನೇಮಕಾತಿ.
೩೧	೪೪	ವರ್ಗೇತರ (ಎಕ್ಸ್ ಕೇಡರ್) ಹುದ್ದೆಗಳಿಗೆ ರಾಜ್ಯ ಸಿಬ್ಬಂದಿಯವರ ನೇಮಕಾತಿ ಪರಿಶೀಲನೆ.
೩೨	೪೬ (೧) (೨)	ಜಿಲ್ಲಾಧಿಕಾರಿಗಳ ತೈನಾತಿ.
೩೩	೫೦ (ಮತ್ತು ೫೧)	ಪ್ರತಿಯೊಂದು ಆಡಳಿತ ಇಲಾಖೆಯಲ್ಲಿ ತರಬೇತಿ ಕೋಶಗಳನ್ನು ನಿರ್ಮಿಸುವುದು.
೩೪	—	ರಾಜ್ಯ ಸಿಬ್ಬಂದಿ ನೇಮಕಾತಿ.

ಶ್ರೀ ಪಿ. ರಾಮಾದೇವ್.– ಸರ್ಕಾರ ಮಿತವ್ಯಯ ಸಾಧನೆ ಮಾಡಿದೆ ಎಂಬುದನ್ನು ಹೇಳಿದ್ದೀರಿ. ತಾವು ಅಧಿಕಾರಕ್ಕೆ ಬಂದ ಮೇಲೆ ತಮ್ಮ ಇಲಾಖೆಯಲ್ಲಿ ಎಷ್ಟು ಮಿತವ್ಯಯ ಸಾಧನೆ ಮಾಡಿದ್ದೀರಿ ? ಅದೇ ರೀತಿ ಬೇರೆ ಯಾವ ಯಾವ ಇಲಾಖೆಗಳಲ್ಲಿ ಎಷ್ಟು ಮಿತವ್ಯಯ ಸಾಧನೆ ಆಗಿದೆ ? ಎಷ್ಟು ಹಣ ಉಳಿತಾಯವಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.— ಆ ವಿವರಗಳು ನನ್ನ ಪತ್ತಿರ ಇಲ್ಲ, ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಪಿ. ರಾಮಾದೇವ್.— ಸಾಧಾರಣವಾಗಿ ಶ್ರೀಸಾಮಾನ್ಯರ ಸಂಪರ್ಕ ಬರತಕ್ಕದ್ದು ತಾಲ್ಲೂಕು ಕಚೇರಿ, ಪಂಚಾಯಿತಿ, ಪುರಸಭೆ ಮತ್ತು ನಗರಸಭೆ ಕಚೇರಿಗಳು, ವಿಧಾನಸೌಧದಲ್ಲಿ ಜಾಸ್ತಿ ಸಂಪರ್ಕ ಇರುವುದಿಲ್ಲ. ಇಲ್ಲಿ ಒಂದೊಂದು ಕೆಲಸ ಆಗುವುದಕ್ಕೆ ನೂರಾರು ನಿರ್ಬಂಧನಗಳನ್ನು ಹಾಕಿರುವುದರಿಂದ ತೊಂದರೆಯಾಗಿದೆ ಉದಾಹರಣೆಗೆ ಪ್ಲಾನ್, ಲೈಸೆನ್ಸ್, ವಾಟರ್ ಕನೆಕ್ಷನ್, ಇಲೆಕ್ಟ್ರಿಕ್ ಕನೆಕ್ಷನ್ ಪಂಪ್‌ಸೆಟ್ ಇತ್ಯಾದಿಗಳನ್ನು ತೆಗೆದುಕೊಳ್ಳಬೇಕಾದರೆ ಇಲ್ಲಿ ಸಾಕಷ್ಟು ನಿರ್ಬಂದ ಹಾಕಿರುವುದರಿಂದ ನಿಧಾನವಾಗುತ್ತಿದೆ. ಆದ್ದರಿಂದ ಪ್ರೊಸೀಜರನ್ನು ಸಿಂಪ್ಲಿಫೈ ಮಾಡತಕ್ಕ ಯೋಚನೆ ಸರ್ಕಾರದಲ್ಲಿದೆಯೆ ?

ಶ್ರೀ ರಾಮಕೃಷ್ಣ ಹೆಗಡೆ.—ಸದಸ್ಯರು ಕೇಳತಕ್ಕ ಪ್ರಶ್ನೆಗೆ ಎರಡು ರೀತಿಯಿಂದ ಉತ್ತರಿಸಬಹುದು ಮೊದಲನೆಯದು, ಅಧಿಕಾರ ವಿಕೇಂದ್ರೀಕರಣ ಮಾಡುವುದು, ಮತ್ತೊಂದು ಆಡಳಿತದಲ್ಲಿ ಆಧುನೀಕರಣ ಮಾಡುವುದು. ಈ ಎರಡೂ ವಿಚಾರಗಳಲ್ಲಿ ಈಗಾಗಲೇ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ

ಅಧಿಕಾರ ವಿಕೇಂದ್ರೀಕರಣದ ವಿಚಾರದಲ್ಲಿ ಹೇಳುವುದಾದರೆ, ಯಾವ ಅಧಿಕಾರ ಕೇಂದ್ರ ಆಫೀಸಿನಲ್ಲಿತ್ತು, ಆದರಲ್ಲಿ ಬಹಳಷ್ಟು ಅಧಿಕಾರವನ್ನು ಡಿವಿಜನಲ್, ಡಿಸ್ಟ್ರಿಕ್ಟ್ ಮತ್ತು ಅದಕ್ಕಿಂತ ಕೆಳಮಟ್ಟಕ್ಕೆ ವರ್ಗಾಯಿಸಿದ್ದೇವೆ. ಪ್ರತಿಯೊಬ್ಬ ಜಿಲ್ಲಾಧಿಕಾರಿಗಳಿಗೆ, ಪ್ರತಿಯೊಬ್ಬ ಅಸಿಸ್ಟೆಂಟ್ ಕಮೀಷನರಿಗೆ, ತಹಶೀಲ್ದಾರರಿಗೆ ಮತ್ತು ಬಿ. ಡಿ. ಓ. ಗಳಿಗೆ ನಾವು ಈಗಾಗಲೇ ಸೂಚನೆ ನೀಡಿ, ಕಚೇರಿ ಇರತಕ್ಕ ದಿನಗಳಲ್ಲಿ ಪ್ರತಿ ದಿವಸ ಬೆಳಿಗ್ಗೆ ನಿರ್ದಿಷ್ಟವಾಗಿ ಒಂದು ಗಂಟೆ ಕಾಲ ಸಾರ್ವಜನಿಕರನ್ನು ಭೇಟಿ ಮಾಡಲಿಕ್ಕೆ ವ್ಯವಸ್ಥೆ ಮಾಡಲಿಕ್ಕೆ ಬೇಕೆಂದು ಹೇಳಿದ್ದೇವೆ. ಯಾರಾದರೂ ಯಾವುದಾದರೂ ಸಮಸ್ಯೆಯನ್ನು ತಂದರೆ ಅವರನ್ನು ನೇರವಾಗಿ ಭೇಟಿಯಾಗುವುದಕ್ಕೆ ಅವಕಾಶ ಕೊಡಬೇಕು. ಅವರು ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬರತಕ್ಕದ್ದಲ್ಲ, ಪ್ರತಿ ತಿಂಗಳು ಎಷ್ಟು ಕೇಸುಗಳು ಬರುತ್ತವೆ ಮಂತ್ತು ಅವುಗಳ ಪೈಕಿ ಸ್ಥಳದಲ್ಲೇ ಎಷ್ಟಕ್ಕೆ ತೀರ್ಮಾನ ಕೊಡುತ್ತಾರೆ ಎಂಬ ಬಗ್ಗೆ ಪ್ರತಿ ತಿಂಗಳು ವರದಿ ಕಳುಹಿಸಬೇಕೆಂದು ಸೂಚಿಸಿದ್ದೇವೆ. ಮಹಾರಾಷ್ಟ್ರದ ಅಹಮದ್‌ನಗರದ ಜಿಲ್ಲಾಧಿಕಾರಿಗಳ ಬಗ್ಗೆ ಮರಾಠಿ ಪತ್ರಿಕೆಯಲ್ಲಿ ಬಂದಂತಹ ಒಂದು ಲೇಖನವನ್ನು ನೋಡಿದೆ. ಆ ಜಿಲ್ಲಾಧಿಕಾರಿಗಳು ತಮ್ಮ ಆಡಳಿತದಲ್ಲಿ ಒಂದು ಸಣ್ಣ ಕ್ರಾಂತಿಯನ್ನೇ ಮಾಡಿದ್ದಾರೆ. ಅಂದರೆ ಕೆಲಸ ಅವರು ಕೆಲಸ ಮಾಡತಕ್ಕೆ ಕಾಲದಲ್ಲಿ ಮತ್ತು ಜನರ ಜೊತೆಗೆ ವ್ಯವಹಾರ ಮಾಡತಕ್ಕ ಕಾಲದಲ್ಲಿ ಯಾವ ರೀತಿ ನಡೆದುಕೊಂಡರು ಎಂಬುದು ಮುಖ್ಯ. ಆ ಬಗ್ಗೆ ಬಂದಿರತಕ್ಕ ಲೇಖನವನ್ನು ಕನ್ನಡ ಮತ್ತು ಇಂಗ್ಲೀಷಿಗೆ ತರ್ಜಮೆ ಮಾಡಿಸಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟು ಅದೇ ಮಾದರಿಯಲ್ಲಿ ನೀವೂ ಕೂಡ ನಿಮ್ಮ ಕಚೇರಿಯಲ್ಲಿ ಕೆಲಸ ಮಾಡಬೇಕೆಂದು ಹೇಳಿದ್ದೇನೆ. ಮೊದಲು ಜಮಾಬಂಧಿ ಪದ್ಧತಿ ಇತ್ತು. ಅದು ಇದ್ದಾಗ ಅನೇಕ ದೊಡ್ಡ ದೊಡ್ಡ ಅಧಿಕಾರಿಗಳು ಜನತೆಯ ಜೊತೆಯಲ್ಲಿ ನೇರವಾಗಿ ಸಂಪರ್ಕ ಇಟ್ಟುಕೊಳ್ಳಲು ಸಾಧ್ಯವಾಗುತ್ತಿತ್ತು. ಮಧ್ಯದಲ್ಲಿ ಅದು ನಿಂತುಹೋಯಿತು ಈಗ ಮತ್ತೆ ಅದನ್ನು ಮಾಡಬೇಕೆಂದು ಹೇಳಿದ್ದೇನೆ. ಅಧಿಕಾರಿಗಳು ಪ್ರವಾಸ ಹೋದಾಗ ಹಳ್ಳಿಯಲ್ಲಿರತಕ್ಕ ಜನರೆಲ್ಲರನ್ನೂ ಕರೆಯಬೇಕು ಮತ್ತು ಅವರ ಸಮಸ್ಯೆಗಳನ್ನು ತಿಳಿದುಕೊಳ್ಳಲಿಕ್ಕೆ ನೇರವಾಗಿ ಪ್ರಯತ್ನ ಮಾಡಬೇಕೆಂದು ಹೇಳಿದ್ದೇನೆ. ಎರಡನೆಯದಾಗಿ, ಆಡಳಿತಕ್ಕೆ ಸಂಬಂಧಪಟ್ಟ ಹಾಗೆ ಗಡಚು ವಿಚಾರ ಬಂದಾಗ ಮತ್ತು ಮಾಹಿತಿ ಸಂಗ್ರಹಿಸಲು ಬಹಳಷ್ಟು ಸಿಬ್ಬಂದಿ ವರ್ಗ ಬೇಕಾದಾಗ, ಮತ್ತಿತರ ಸಂದರ್ಭಗಳಲ್ಲಿ ಕಂಪ್ಯೂಟರನ್ನು ಬಳಸಿ ಆದರ ಮೂಲಕ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಮಾಡಿದ್ದೇವೆ. ಅದೂ ಕೂಡ ಈಗಾಗಲೇ ಆಗಿದೆ. ಇನ್ನು ಕಾಪಿ ಮಾಡತಕ್ಕದ್ದರ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಯಾವುದೇ ಒಂದು ನಕಲು ಸಿಗಬೇಕಾದರೆ ಒಂದೆರಡು ವಾರಗಳು ಬೇಕಾಗುತ್ತಿತ್ತು. ಅದಕ್ಕೆ ಕಾರಣ, ಪ್ರತಿಯೊಂದು ಜಿಲ್ಲಾ ಕಚೇರಿಗಳಲ್ಲಿ ಮಾತ್ರವಲ್ಲ ತಾಲ್ಲೂಕು ಕಚೇರಿಗಳಲ್ಲೂ ಕೂಡ ಕಾಪಿ ಪೆಂಡಿಂಗ್‌ಗಳನ್ನು ಇಡಬೇಕೆಂದು ಮಾಡಿದ್ದೇವೆ. ಆಗ ಜನರಿಗೆ ಕಾಪಿ ಬೇಕಾದಾಗ ಐ ನಿಮಿಷದಲ್ಲಿ ಕಾಪಿಗಳನ್ನು ಕೊಡಬಹುದು. ಈ ರೀತಿಯಾಗಿ ಅನೇಕ ಪ್ರಚಾರಗಳಲ್ಲಿ ಆಧುನೀಕರಣಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ತುಂಗಭದ್ರಾ ಜಲಾಶಯಕ್ಕೆ ಪಾಲಿ ಪೈಪರ್ ಕಂಪನಿಯಿಂದ ಕಲ್ಕುಶಗಳನ್ನೊಳಗೊಂಡ ನೀರನ್ನು ಬಿಡುತ್ತಿರುವುದು

ಶ್ರೀ ಕೆ. ಪೆಟ್. ಕಾರಡಗಿ (ಮುಂಡರಗಿ).—

(೧೧೮೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

ಅ) ತುಂಗಭದ್ರಾ ಜಲಾಶಯಕ್ಕೆ ಪಾಲಿ ಪೈಪರ್ ಕಂಪನಿಯಿಂದ ಬಂದ ನೀರನ್ನು ಬಿಡುವುದರಿಂದ ಮುಂಡರಗಿ ತಾಲ್ಲೂಕಿನ ಜನರಿಗೆ ಮತ್ತು ದನಕರುಗಳಿಗೆ ತೊಂದರೆಯಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ, ಆ ಬಗ್ಗೆ ಸರಕಾರದವರು ಕೈಗೊಂಡಿರುವ ಕ್ರಮವೇನು ?

ಆ) ಇದರಿಂದಾಗಿ ಜನರ ಆರೋಗ್ಯ ಕೆಡುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ಮತ್ತು ಹಾಗಿದ್ದಲ್ಲಿ ಆ ಬಗ್ಗೆ ಸರಕಾರದವರು ಕೈಗೊಂಡ ಕ್ರಮವೇನು ?

X X X X X

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ತಾರೀಖು ೧೩, ೧೪ ಈ ಎರಡು ದಿನಗಳಲ್ಲಿ ವಿದ್ಯುಚ್ಛಕ್ತಿಯ ಪೂರೈಕೆ ನಿಂತಿದ್ದರಿಂದ ಕಲುಷಿತ

Reply not Received.